NAME OF THE NEWS PAPER: ಕನ್ನಡಪ್ರಭ DEPARTMENT / SUBJECT DATE: 7-12-19

# ಮಹಿಳಾ ಸುರಕ್ಷತೆಗಾಗಿ ಹಲೋ ನೈಬರ್

## ಸ್ತ್ರೀಯರ ರಕ್ಷಣೆಗಾಗಿ ನೆರೆಹೊರೆಯವರ ಜತೆ ಬಾಂಧವ್ಯ ಮೂಡಿಸಲು ಮುಂದಾದ ಪೊಲೀಸ್ ಇಲಾಖೆ

## ಅಕ್ಕಪಕ್ಕದವರ ಜತೆ ಭಾಂಧವ್ಯ ಬೆಳೆದರೆ ನಿವಾಸಿಗಳ ನೈತಿಕ ಬೆಂಬಲ ಹೆಚ್ಚಳ: ಭಾಸ್ಕರ್ ರಾವ್ ಅಭಿಮತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಪರಾಧ ಕೃತ್ಯಗಳು ನಿಯಂತ್ರಣ ಹಾಗೂ ಮಹಿಳೆಯರ ಸುರಕ್ಷತೆ ಸಲುವಾಗಿ ನೆರೆ ಹೊರೆಯವರಮಧ್ಯೆ ಬಾಂಧವ್ಯ ಮೂಡಿಸಲು ರಾಜಧಾನಿ ಪೊಲೀಸರು 'ಹಲೋ ನೈಬರ್' ಎಂಬನೂತನಕಾರ್ಯಕ್ರಮಜಾರಿಗೊಳಿಸಲು ಮುಂದಾಗಿದ್ದಾರೆ.

ಅಪರಾಧ ಕೃತ್ಯಗಳಿಗೆ ಕಡಿವಾಣ ಹಾಕಲು ಪೊಲೀಸರಿಗೆ ಸಾರ್ವಜನಿಕರ ಸಹಕಾರ ಬಹುಮುಖ್ಯವಾಗಿದೆ. ಎಷ್ಟೋ ಜನರಿಗೆ ತಮ್ಮ ಅಕ್ಕಪಕ್ಕದ ನೆಲೆಸಿರುವ ಕುಟುಂಬಗಳೇ ಅಪರಿಚಿತವಾಗಿರುತ್ತವೆ. ಹೀಗಾಗಿ ಅಕ್ಕಪಕ್ಕದ ಜನರಲ್ಲಿ ಬಾಂಧವ್ಯ ಮೂಡಿದರೆ ನೈತಿಕ ಬೆಂಬಲ ಸಿಗುತ್ತದೆ ಎಂದು ನಗರ ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ಅಭಿಪ್ರಾಯಪಟ್ಟರು.

ಪ್ರತಿ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಜನ ವಸತಿ ಪ್ರದೇಶಗಳಲ್ಲಿ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುತ್ತದೆ. ಇದರಲ್ಲಿ ನೆರೆಹೊರೆಯವರನ್ನು ಪರಸ್ಪರ ಪರಿಚಯಿಸಲಾಗುವುದು. ಅಲ್ಲದೆ, ನಾಗರಿಕರಿಗೆ ಠಾಣಾಧಿಕಾರಿಗಳ ಹೆಸರು, ಮೊಬೈಲ್ ಸಂಖ್ಯೆ ಹಾಗೂ ಗಸ್ತು ಸಿಬ್ಬಂದಿ ವಿವರ ಒದಗಿಸಲಾಗುವುದು ಅವರು ತಿಳಿಸಿದರು.

**ಸುರಕ್ಷಾ ಆ್ಯಪ್‌ಗೆ ಬೇಡಿಕೆ ಹೆಚ್ಚಳ:** ನಗರ ವ್ಯಾಪ್ತಿ ಮಹಿಳೆ ಮತ್ತು ಮಕ್ಕಳ ರಕ್ಷಣೆಗೆ ಹೆಚ್ಚಿನ ಜಾಗೃತಿವಹಿಸಲಾಗಿದೆ. ಗಸ್ತು ಹೆಚ್ಚಿಸಲಾಗಿದ್ದು, ದುರಸ್ತಿ ಸ್ಥಿತಿಯಲ್ಲಿದ್ದ ಗಸ್ತು ವಾಹನಗಳನ್ನು ರಿಪೇರಿ ಮಾಡಿಸಲಾಗಿದೆ ಎಂದು ಆಯುಕ್ತರು ಹೇಳಿದರು.

ಹೈದರಾಬಾದ್ ಘಟನೆ ಬಳಿಕ ಬೆಂಗಳೂರು ಪೊಲೀಸರು ರೂಪಿಸಿರುವ 'ಸುರಕ್ಷಾ ಆ್ಯಪ್'ಗೆ ಬೇಡಿಕೆ ಹೆಚ್ಚಾಗಿದೆ. ಇದುವರೆಗೆ 1.9 ಲಕ್ಷ ಮಂದಿ ಡೌನ್ ಲೋಡ್ ಮಾಡಿದ್ದಾರೆ. ಸ್ಮಾರ್ಟ್ ಫೋನ್ ಇಲ್ಲದವರಿಗೆ ನಮ್ಮ 100 (ಪೊಲೀಸ್ ನಿಯಂತ್ರಣ ಕೊಠಡಿ) ಬಗ್ಗೆ ಮಾಹಿತಿ ನೀಡಲಾಗುತ್ತಿದೆ ಎಂದು ವಿವರಿಸಿದರು.

ಆ್ಯಪ್‌ನಲ್ಲಿ ಸಂಕಷ್ಟದ ಕರೆಗೆ ಸ್ಪಂದಿಸಲು 9 ನಿಮಿಷಗಳ ಕಾಲಮಿತಿ ನಿಗದಿ ಪಡಿಸಲಾಗಿದೆ. ಈಗ ಹೊಸದಾಗಿ ಮತ್ತಷ್ಟು ಕ್ರಮಗಳನ್ನು ಕೈಗೊಂಡಿರುವ ಕಾರಣ 7 ನಿಮಿಷಕ್ಕೆ ನೆರವು ಸಿಗಲಿದೆ ಬೆಂಗಳೂರಿನ ರಾತ್ರಿ ಪಾಳಿಯವಲ್ಲಿ ಸಾಕಷ್ಟು ಜನರು ಕೆಲಸ ಮಾಡುತ್ತಾರೆ. ಈ ಉದ್ಯೋಗಿಗಳ ಪ್ರಯಾಣ ಸುರಕ್ಷತೆಗೆ ಕೆಎಸ್ ಆರ್‌ಟಿಸಿ, ಬಿಎಂಟಿಸಿ ಹಾಗೂ ಖಾಸಗಿ ಸಾರಿಗೆ ಸಂಸ್ಥೆಗಳಿಗೆ ಸೂಕ್ತ ಸೂಚನೆ ನೀಡಿದ್ದೇವೆ. ಈ ಬಗ್ಗೆ ಸರ್ಕಾರದ ಮುಖ್ಯಕಾರ್ಯದರ್ಶಿಗಳ ಸಹ ಕ್ರಮ ತೆಗೆದುಕೊಂಡಿದ್ದಾರೆ ಎಂದು ಆಯುಕ್ತರು ಹೇಳಿದರು.

### ಎನ್‌ಕೌಂಟರ್‌ಗೆ ಬೆಂಬಲ ಅಗತ್ಯ

ಹೈದರಾಬಾದ್‌ನಲ್ಲಿ ಪಶುವೈದ್ಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಆರೋಪಿಗಳ ಎನ್ ಕೌಂಟರ್‌ನ್ನು ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ಬೆಂಬಲಿಸಿದ್ದಾರೆ. ಈ ಘೋರ ಘಟನೆಯೂ ದೇಶ ವ್ಯಾಪ್ತಿ ಚರ್ಚೆಗ ಗ್ರಾಸವಾಗಿದೆ. ಹೀಗಾಗಿ ಆರೋಪಿಗಳು ತಪ್ಪಿಸಿಕೊಂಡಿದ್ದರೆ ಪೊಲೀಸರು ಬೆಲೆ ತೆರಬೇಕಾಗಿತ್ತು, ಈ ಹಿನ್ನೆಲೆಯಲ್ಲಿ ಆರೋಪಿಗಳ ಮೇಲೆ ಪೊಲೀಸರು ಗುಂಡು ಹಾರಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಪೊಲೀಸರನ್ನು ಎಲ್ಲರೂ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

# ಸ್ತ್ರೀ ರಕ್ಷಣೆ ನಾಗರಿಕ ಸಮಾಜದ ಹೊಣೆ

## ಜರ್ಮನ್ ಸಂಸದರ ಜತೆ ಮಹಿಳಾ ರಕ್ಷಣೆ ಜತೆ ಸಮುದಾಯ ಪೊಲೀಸಿಂಗ್ ಸಂವಾದ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮಹಿಳೆಯರಿಗೆ ರಕ್ಷಣೆ ನೀಡದೆ ಇದ್ದರೆ ಅದನ್ನು ನಾಗರಿಕ ಸಮಾಜ ಎನ್ನಲು ಸಾಧ್ಯವಿಲ್ಲ ಎಂದು ನಗರ ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ಹೇಳಿದರು.

ನಗರ ಪೊಲೀಸ್ ಆಯುಕ್ತ ಕಚೇರಿಯಲ್ಲಿ ಶುಕ್ರವಾರ ಜರ್ಮನ್ ದೇಶದ ಸಂಸದರ ಜತೆ 'ಸಮುದಾಯ ಪೊಲೀಸಿಂಗ್' ಕುರಿತು ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, ಮಹಿಳೆಯರ ರಕ್ಷಣೆಯೇ ನಮ್ಮ ಮೊದಲ ಆದ್ಯತೆಯಾಗಿದೆ. ಮಹಿಳೆಯರ ರಕ್ಷಣೆ ವಿಚಾರದಲ್ಲಿ ಪೊಲೀಸರ ಜತೆ ನಾಗರಿಕ ಸಮಾಜ ಸಹ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಮಹಿಳೆ ರಕ್ಷಣೆ ಸಂಬಂಧ ಜರ್ಮನ್ ದೇಶದಲ್ಲಿ ಜಾರಿಗೊಳಿಸಿರುವ ಕಾರ್ಯಕ್ರಮಗಳ ಬಗ್ಗೆ ಸಂಸದರೊಂದಿಗೆ ಸಮಾಲೋಚಿಸಲಾಯಿತು ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಜರ್ಮನ್ ಸಂಸದರ ನಿಯೋಗದ ಮುಖ್ಯಸ್ಥ ವೋಲ್ಕರ್ ಫ್ಲಾನ್ ಅವರು, ನಮಗೆ ಬೆಂಗಳೂರ ನಗರ ಪೊಲೀಸ್ ವ್ಯವಸ್ಥೆ ಮತ್ತು ಮಹಿಳೆಯ ರಕ್ಷಣೆಗೆ ಜಾರಿಯಲ್ಲಿರುವ ಕಾರ್ಯಕ್ರಮಗಳ ಬಗ್ಗೆ ತಿಳಿದು ಬಹಳ ಖುಷಿಯಾಗಿದೆ. ಹಲವು ವಿಚಾರಗಳ ಬಗ್ಗೆ ಪೊಲೀಸರೊಂದಿಗೆ ಮುಕ್ತ ಸಂವಾದ ನಡೆದಿದೆ ಎಂದರು.

ಅಪರಾಧತಡೆಗೆ ಮಾತ್ರವಲ್ಲದೆ ಸಂತ್ರಸ್ತರ ಕುಟುಂಬ ರಕ್ಷಣೆಗೂ ಸಹ ಆದ್ಯತೆ ನೀಡಬೇಕು. ಭಾರತದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಪೊಲೀಸರನ್ನು ನೇಮಕಾತಿ ನಡೆದಿಲ್ಲ. ಸರ್ಕಾರಗಳು ನಾಗರಿಕರ ರಕ್ಷಣೆ ವಿಷಯದಲ್ಲಿ ರಾಜಿ ಮಾಡಿಕೊಳ್ಳುವುದು ಉತ್ತಮ ನಡೆಯಲ್ಲ ಎಂದು 'ರಾ' ಮಾಜಿ ಅಧಿಕಾರಿ ಪಿ.ಕೆ. ಹಾರ್ಮಸ್ ತಾರಕನ್ ಬೇಸರ ವ್ಯಕ್ತಪಡಿಸಿದರು.



ಬೆಂಗಳೂರು ಪೊಲೀಸ್ ಆಯುಕ್ತರ ಕಚೇರಿಗೆ ಶುಕ್ರವಾರ ಭೇಟಿ ನೀಡಿದ್ದ ಜರ್ಮನ್ ಸಂಸದರ ನಿಯೋಗಕ್ಕೆ ಶ್ವಾನದಳದ ಬಗ್ಗೆ ಆಯುಕ್ತ ಭಾಸ್ಕರ್ ರಾವ್ ಮಾಹಿತಿ ನೀಡಿದರು.

ಅತ್ಯಾಚಾರ ಕೃತ್ಯಗಳು ನಡೆದಾಗ ಆರಂಭದಲ್ಲಿ ದೊಡ್ಡದಾಗಿ ಜನ ದನಿ ಕೇಳುತ್ತದೆ. ಆನಂತರ ಎಲ್ಲರೂ ಮರೆತು ಹೋಗುತ್ತಾರೆ. ಪೊಲೀಸರು, ನ್ಯಾಯಾಂಗ, ಮಾಧ್ಯಮ ಹಾಗೂ ಸರ್ಕಾರ ಎಲ್ಲರೂ ಘಟನೆಯನ್ನು ಮರೆತು ತಮ್ಮ ಪಾಡಿಗೆ ತಾವು ಬೇರೆ ಕೆಲಸದತ್ತ ಗಮನ ಹರಿಸುತ್ತಾರೆ. ಮಹಿಳೆಯರ ಸುರಕ್ಷತೆ ವಿಷಯದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಸೌಲಭ್ಯಗಳು ಇಲ್ಲವೆಂಬ ನೆಪಗಳನ್ನು ಹೇಳಬಾರದು. ವ್ಯವಸ್ಥೆ ಸರಿಯಿಲ್ಲ ಎಂಬ ಉಡಾಫೆ ತನವೂ ಬೇಡ ಎಂದು ನಿವೃತ್ತ ಡಿಜಿಪಿ ಡಾ.ಎಸ್.ಟಿ.ರಮೇಶ್ ನುಡಿದರು. ವಿಚಾರ ಸಂಕಿರಣದಲ್ಲಿ ಜರ್ಮನ್ ಸಂಸದರಾದ ಡಾ.ಜಾರ್ಜ್ ಕಿಪೆಲ್ ಹಾಗೂ ಡಾ.ಕಾಲೂಸ್ ಪೀಟರ್ ಸೇರಿದಂತೆ ಮತ್ತಿತರರು ಇದ್ದರು.